ಲಿಂಗಸುಗೂರು ಪಟ್ಟಣದ ಕೆರೆ ಅಭಿವೃದ್ಧಿ

82(70); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) ಲಿಂಗಸಗೂರು ಪಟ್ಟಣದ ಕೆರೆಯನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ.

ಆ) ಹಾಗಿದ್ದಲ್ಲಿ, ಈ ಕೆರೆಯನ್ನು ಅಭಿವೃದ್ಧಿಪಡಿಸಲು ಸರ್ಕಾರದ ಅನುದಾನವನ್ನೇನಾದರು ನಿಗಧಿಪಡಿಸಿದೆಯೆ.

ಇ) ಹಾಗಿದ್ದಲ್ಲಿ, ಎಷ್ಟು ಮೊತ್ತದ ಅನುದಾನವನ್ನು ನಿಗಧಿಪಡಿಸಲಾಗಿದೆ;

ಈ) ಹಾಗಿದ್ದಲ್ಲಿ, ಈ ಕೆರೆಯ ಅಭಿವೃದ್ಧಿಯ ಕಾಮಗಾರಿಗಾಗಿ ಟೆಂಡರ್ ಕರೆಯಲಾಗಿದೆಯೇ;

ಉ) ಹಾಗಿದ್ದಲ್ಲಿ, ಯಾವ ಸಂಸ್ಥೆಯವರಿಗೆ ಟೆಂಡರ್ ನೀಡಲಾಗಿದೆ ಮತ್ತು ಯಾವಾಗಿನಿಂದ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು (ಸಂಪೂರ್ಣ ವಿವರ ನೀಡುವುದು)

ಶ್ರೀ ಖಮರುಲ್ ಇಸ್ಲಾಂ (ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು)

ಅ) ಹೌದು

ಆ) ನಿಗಧಿಪಡಿಸಿದೆ.

ಇ) ಬಿ.ಆರ್.ಜಿ.ಎಫ್ ಅನುದಾನ ಮತ್ತು ಎಸ್.ಎಫ್.ಸಿ ಅನುದಾನದಲ್ಲಿ ₹ 72 ಲಕ್ಷ ನಿಗಧಿಪಡಿಸಲಾಗಿದೆ.

ಈ) ಟೆಂಡರ್ ಕರೆದಿರುವುದಿಲ್ಲ

ಉ) ಸಾರ್ವಜನಿಕ ಹಿತದೃಷ್ಟಿಯಿಂದ ಕಾಮಗಾರಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆದು

ಗುತ್ತಿಗೆದಾರರನ್ನು ನಿಗಧಿಪಡಿಸಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಜಲ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆ

83(71); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) ಲಿಂಗಸಗೂರು ತಾಲ್ಲೂಕು, ಗೋಲಪಲ್ಲಿ ಗ್ರಾಮದ ಹಿನ್ನೀರಿನಲ್ಲಿ ಜಲ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು;

ಇ) ಹಾಗಿದ್ದಲ್ಲಿ, ಜಲ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಸರ್ಕಾರ ಅನುದಾನವನ್ನೇನಾದರು ನಿಗಧಿಪಡಿಸಿ ಯೋಜನೆಯನ್ನು ಸಿದ್ದಪಡಿಸಿದೆಯೇ

ಈ) ಹಾಗಿದ್ದಲ್ಲಿ; ನಿಗದಿಪಡಿಸಿರುವ ಯೋಜನಾ ಗಾತ್ರದ ಅನುದಾನದ ಮೊತ್ತವೆಷ್ಟು;

ಉ) ಪ್ರಸಕ್ತ ಸಾಲಿನಲ್ಲಿಯೇ ಲಿಂಗಸಗೂರು ತಾಲ್ಲೂಕು ಗೋಲಪಲ್ಲಿ ಗ್ರಾಮದ ಹಿನ್ನೀರಿನಲ್ಲಿ ಜಲ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಲಿಂಗಸುಗೂರು ತಾಲ್ಲೂಕು, ಗೋಲಪಲ್ಲಿ ಗ್ರಾಮದಲ್ಲಿ ಖಾಸಗಿ ಯೋಜನಾದಾದರಾದ M/s Sri Balaji Biomass Power (p) Ltd. ರವರಿಗೆ ಕೃಷ್ಣ ನದಿಗೆ ಅಡ್ಡಲಾಗಿ ಹಟ್ಟಿ ಹೊಳೆ, ಗೋಲಪಲ್ಲಿ ಗ್ರಾಮದಲ್ಲಿ 2 ಮೆ.ವ್ಯಾ. ಕಿರುಜಲ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ಸರ್ಕಾರದ ಆದೇಶ ಸಂಖ್ಯೆ: EN 328 NCE 2007, ದಿನಾಂಕ: 17.02.2010 ರಲ್ಲಿ ಅನುಮತಿ ನೀಡಲಾಗಿದೆ.